ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 347/2025

ಪಿ ಡಬ್ಲ್ಯೂ:1
ಸಿ ಡಬ್ಲ್ಯೂ: 2

| | | |
|---|---|---|
| ಸಾಕ್ಷಿಯ ಹೆಸರು | : | ಅಲ್ತಾಫ್ ಕೊತವಾಲ್ |
| ತಂದೆಯ ಹೆಸರು | : | ಇಬ್ರಾಹಿಮ್ |
| ವಯಸ್ಸು | : | 37 |
| ಉದ್ಯೋಗ | : | ಹೋಂಮ್ ಗಾರ್ಡ್ |
| ವಾಸಸ್ಥಳ | : | ರಾಣೆಬೆನ್ನೂರು |

ದಿನಾಂಕ: 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ**

ದಿನಾಂಕ: 08.01.2025 ರಂದು ಹನಮಾಪುರ ತಾಂಡಾಕ್ಕೆ ಸಂಜೆ 4.10 ರ ಸುಮಾರಿಗೆ ಚಾಸಾ 1 ರವರ ಜೊತೆ ನಾನು ಮತ್ತು ಚಾಸಾ 3 ರವರು ಹೋಗಿದ್ದು, ಸದರಿ ಗ್ರಾಮದ ಒಂದು ಶೆಡ್‌ನ ಅಂಗಡಿಗೆ ಹೋಗಿ ನೋಡಿದ್ದು ಬಾಗಿಲಿಗೆ ಬೀಗ ಹಾಕಿತ್ತು. ಸದರಿ ಬಾಗಿಲನ್ನು ಚಾಸಾ 1 ರವರು ತೆಗೆದು ಒಳಗೆ ಹೋಗಿ ನೋಡಲಾಗಿ, ಸದರಿ ಅಂಗಡಿಯ ಟೇಬಲ್ ಕೆಳಗಡೆ ಒಟ್ಟು 3 ಪಟ್ಟಿಗೆಗಳು ಇದ್ದು, ಸದರಿ ಪೆಟ್ಟಿಗೆಗಳಲ್ಲಿ ವಿಸ್ಕಿ ಟೆಟ್ರಾ ಪ್ಯಾಕೆಟ್ಟಗಳು ಇದ್ದವು. ಅವುಗಳನ್ನು ಪರಿಶೀಲಿಸಿದಾಗ 90 ಮಿಲಿ ಓಸಿ ವಿಸ್ಕಿ ಟೆಟ್ರಾ ಪ್ಯಾಕೆಟ್ಟಗಳು 92, 90 ಮಿಲಿಯ ಬಿ.ಪಿ ವಿಸ್ಕಿ 41 ಟೆಟ್ರಾ ಪ್ಯಾಕೆಟ್ಟಗಳು ಮತ್ತು 90 ಮಿಲಿಯ ಹಚ್.ಸಿ ವಿಸ್ಕಿ ಟೆಟ್ರಾ ಪ್ಯಾಕೆಟ್ಟಗಳು ಇದ್ದು, ಆ ಸಮಯದಲ್ಲಿ ನಾನು ಮತ್ತು ಚಾಸಾ 1 ಹಾಗೂ 3 ರವರು ಹಾಜರಿದ್ದು ಗ್ರಾಮಸ್ತರು ಸದರಿ ಅಂಗಡಿಯ ಹೊರಭಾಗದಲ್ಲಿದ್ದರು.

2. ಸದರಿ ಟೆಟ್ರಾ ಪ್ಯಾಕೆಟ್ಟಗಳನ್ನು ನಾವು ಜಪ್ತಿ ಪಡೆಸಿಕೊಂಡು ಸಂಜೆ 4.10 ರಿಂದ 4.40 ರವರೆಗೆ ಗುನ್ನೆ ಜಾಗದ ಪಂಚನಾಮೆಯನ್ನು ತಯಾರಿಸಿರುತ್ತೇವೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಚಾಸಾ 1 ರವರು ಬರೆದಿರುತ್ತಾರೆ. ಸಾಕ್ಷಿಗೆ ಈ ಪ್ರಕರಣದ ಪಿ.ಆರ್.ನಂ.3/2025 ರಲ್ಲಿ ಹಾಜರು ಪಡಿಸಿದ್ದ ಮುದ್ದೆ ಮಾಲುಗಳನ್ನು ತೋರಿಸಿದ್ದು ಸಾಕ್ಷಿಯ

ಸದರಿ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ.1 ರಿಂದ 75 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಈ ಪ್ರಕರಣದ ದಾಳಿಯ ಪೂರ್ವದಲ್ಲಿ ನಾನು ಗುನ್ನಾ ಜಾಗಕ್ಕೆ ಹೋಗಿರಲಿಲ್ಲ ಎಂದರೆ ಸರಿ. ಪಂಚನಾಮೆಯನ್ನು ನಾನು ಹೇಳಿ ಬರೆಸಿರುವುದಿಲ್ಲ ಅವರು ಹೇಳಿ ಬರೆಸಿರುವ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಗುನ್ನಾ ಜಾಗದಲ್ಲಿ ದಾಳಿಯ ಸಮಯದಲ್ಲಿ ಅಂದಾಜು 100 ರಿಂದ 150 ಜನ ಇದ್ದರು. ನಾನು ದಾಳಿಯ ದಿನ ಕರ್ತವ್ಯದಲ್ಲಿ ಇರಲಿಲ್ಲ ಹಾಗೂ ಸಮವಸ್ತ್ರದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಗುನ್ನಾ ಜಾಗದಲ್ಲಿ ನನ್ನ ಸಮಕ್ಷಮ ಯಾವುದೇ ಫೋಟೋ ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯು ಸಹಿ ಮಾಡಿದ ನಂತರ ಫೋಟೋ ತೆಗದಿರುವುದಾಗಿ ನುಡಿಯುತ್ತಾರೆ. ದಾಳಿಗೆ ನನ್ನನ್ನು ಚಾಸಾ 1 ರವರೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಗುನ್ನಾ ಜಾಗದ ಮಾಲಿಕತ್ವದ ಕುರಿತು ದಾಳಿಯ ಸಮಯದಲ್ಲಿ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ನನ್ನ ಸಹಿಗಳನ್ನು ಕಛೇರಿಯಲ್ಲಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಒಂದು ಸಹಿಯನ್ನು ಗುನ್ನಾ ಜಾಗದಲ್ಲಿ ಮಾಡಿರುವುದಾಗಿ ನುಡಿಯುತ್ತಾರೆ.

2. ಮುದ್ದೆ ಮಾಲುಗಳನ್ನು ನಾನು ಏಣಿಸಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಮುದ್ದೆ ಮಾಲುಗಳು ಸಾಮಾನ್ಯವಾಗಿ ಬೇರೆ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಗುನ್ನಾ ಜಾಗದ ಚೆಕ್ಕ್ ಬಂದಿ ನನಗೆ ಗೊತ್ತಿಲ್ಲ. ಗುನ್ನಾ ಜಾಗಕ್ಕೆ ಭೇಟಿ ನೀಡಿದ ಸಮಯದ ಕುರಿತು ಪ್ರಶ್ನೆ ಕೇಳಿದ್ದು ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯಲ್ಲಿ ಈಗಾಗಲೇ ನುಡಿದಿರುವ ಕಾರಣ ಸದರಿ ಪ್ರಶ್ನೆ ತಳ್ಳಿಹಾಕಲಾಯಿತು. ನಾನು ಗುನ್ನಾ ಜಾಗಕ್ಕೆ ಭೇಟಿ ನೀಡದೇ ಇದ್ದರು ಸಹ ನಾನು ಮೇಲಧಿಕಾರಿಗಳ ಮಾತು ಕೇಳಿ ನ್ಯಾಯಾಲಯದು ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಗೂ ಮತ್ತು ಪಿರ್ಯಾದಿ ಇಲಾಖೆಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸಾಕ್ಷಿಯು ಆ ದಿನ ನನ್ನನ್ನು ಪಿರ್ಯಾದಿ ಇಲಾಖೆಗೆ ಕರ್ತವ್ಯಕ್ಕೆ ನಿಯೋಜಿಸಿದ್ದರು ಎಂದು ನುಡಿಯುತ್ತಾರೆ. ನಾನು ಚಾಸಾ 1 ರವರು ಹೇಳಿದಂತೆ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ
ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ: 347/2025

ಪಿ ಡಬ್ಲ್ಯೂ: 2

ಸಿ ಡಬ್ಲ್ಯೂ: 3

| | | |
|---|---|---|
| ಸಾಕ್ಷಿಯ ಹೆಸರು | : | ಸುಶೀಲಾ ನಾಯಕ |
| ಗಂಡನ ಹೆಸರು | : | ರವಿ |
| ವಯಸ್ಸು | : | 42 |
| ಉದ್ಯೋಗ | : | ಹೋಂಮ್ ಗಾರ್ಡ್ |
| ವಾಸಸ್ಥಳ | : | ರಾಣೆಬೆನ್ನೂರು |

ದಿನಾಂಕ: 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ದಿನಾಂಕ: 08.01.2025 ರಂದು ಸಂಜೆ 4.10 ರ ಸುಮಾರಿಗೆ ಚಾಸಾ 1 ಮತ್ತು 2 ಮತ್ತು ವಾಹನ ಚಾಲಕ ಹನುಮಾಪೂ ತಾಂಡಾದ ಒಳಗಡೆ ಹೋಗಿ, ಒಂದು ಗೂಡ ಅಂಗಡಿಯು ಬಾಗಿಲು ಹಾಕಿದ್ದು ಒಂದು ಬೀಗವನ್ನು ಹಾಗೇಯೇ ಸಿಕ್ಕಿಸಿದ್ದು, ಸದರಿ ಬೀಗದ ಚೆಲಕವನ್ನು ಚಾಸಾ 1 ರವರು ತೆಗೆದು ಒಳಗೆ ಹೋಗಿ ನೋಡಲಾಗಿ, ಟೇಬಲ್ ಕೆಳಗಡೆ 3 ರಟ್ಟಿನ ಬಾಕ್ಸಗಳು ಇದ್ಧು, ಅವುಗಳನ್ನು ತೆಗೆದು ನೋಡಲಾಗಿ, ಅವುಗಳಲ್ಲಿ ಒಂದು ರಟ್ಟಿನ ಬಾಕ್ಸನಲ್ಲಿ 90 ಮೀಲಿಯ ಓ.ಸಿ ವಿಸ್ಕಿ ಟೆಟ್ರಾ ಪ್ಯಾಕೆಟ್ ನ 90 ಪ್ಯಾಕೆಟ್ಟಳು, 90 ಮಿಲಿಯ ಬಿ.ಪಿ. ವಿಸ್ಕಿ 41 ಟೆಟ್ರಾ ಪ್ಯಾಕೆಟ್‌ಗಳು ಮತ್ತು 90 ಮಿಲಿಯ ಹೆಚ್.ಸಿ. ವಿಸ್ಕಿ 46 ಟೆಟ್ರಾ ಪ್ಯಾಕೆಟ್‌ಗಳು ಇದ್ದವು.

2. ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ವಿಡಿಯೋಗ್ರಾಫಿ ಮಾಡಿಕೊಂಡು, ಚಾಸಾ 1 ರವರು ಪಂಚನಾಮೆಯನ್ನು ಸಂಜೆ 4.10 ರಿಂದ 4.47 ರ ವರೆಗೆ ತಯಾರಿಸಿದ್ದು, ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯ ಸದರಿ ನಿಪಿ-1 ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಿಪಿ-1 ರ ಪಂಚನಾಮೆಯನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಗುನ್ನಾ ಜಾಗದ ಚೆಕ್ಕ ಬಂದಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಗುನ್ನಾ ಜಾಗದಲ್ಲಿ ದಾಳಿಯ ಸಮಯದಲ್ಲಿ ಸುಮಾರು 10 ರಿಂದ 15 ಜನ ಸೇರಿದ್ದರು. ನಾನು ನನ್ನ ನಿಪಿ-1 ಬಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಗುನ್ನಾ ಜಾಗದಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಪೋಟೋ ತೆಗೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಸಮಕ್ಷಮ ಪೋಟೋ ತೆಗೆದುಕೊಂಡಿದ್ದು, ವಿಡಿಯೋ ಸಹ ಮಾಡಿರುವುದಾಗಿ ನುಡಿಯುತ್ತಾರೆ. ಗುನ್ನಾ ಜಾಗದಲ್ಲಿ 4.10 ರಿಂದ 4.47 ರ ವರಗೆ ಇದ್ದೆವು. ಗುನ್ನಾ ಜಾಗಕ್ಕೆ ಯಾರು ಯಾವಾಗ ಎಷ್ಟು ಹೊತ್ತಿಗೆ ಕರೆದುಕೊಂಡು ಹೋಗಿತ್ತಾರೆ ಎಂಬ ಬಗ್ಗೆ ಪ್ರಶ್ನೇ ಕೇಳಿದು ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯಲ್ಲಿ ಈಗಾಗಲೇ ತಿಳಿಸಿರುವ ಕಾರಣ ಸದರಿ ಪ್ರಶ್ನೇಯನ್ನು ತಳ್ಳಿಹಾಕಲಾಯಿತು.

2. ಮುದ್ದೇ ಮಾಲುಗಳಲ್ಲಿ ಕಾಣಿಸಿರುವ ಲೇಬಲ್ ನಂಬರ್ಗಳನ್ನು ಚಾಸಾ 1 ರವರು ಬರೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಅಂದಾಜು 5 ರಿಂದ 6 ನಂಬರ್ ಗಳನ್ನು ಬರೆದುಕೊಂಡಿರುತ್ತಾರೆ. ನಾನು ಗುನ್ನಾ ಜಾಗಕ್ಕೆ ಹೋಗಿರುವುದಿಲ್ಲ ಹಾಗೂ ಯಾವುದೇ ಪಂಚನಾಮೆ ಮಾಡದೇ ಇದ್ದರು ಸಹ ನಾನು ಠಾಣೆಯಲ್ಲೇ ಕುಳಿತು ಸಹಿ ಮಾಡಿದ್ದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಳಿಯ ಕುರಿತು ಗುನ್ನಾ ಜಾಗಕ್ಕೆ ಭೇಟಿ ನೀಡುವ ಕುರಿತು ಯಾವುದೇ ನೋಟಿಸ್‌ನ್ನು ಚಾಸಾ 1 ರವರು ನೀಡಿರುವುದಿಲ್ಲ ಆದರೆ ನಾವು ಅದೇ ಊರಿನಲ್ಲಿ ಕರ್ತವ್ಯದಲ್ಲಿ ಇದ್ದೇವು ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಪಂಚನಾಮೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ದಾಳಿಯ ಸ್ಥಳ, ದಿನಾಂಕ, ಸಮಯ ಮತ್ತು ಸಿಕ್ಕಿರುವ ಮುದ್ದೇ ಮಾಲುಗಳ ವಿವರಗಳನ್ನು ಬರೆದಿರುತೇವೆ. ಆ ರೀತಿಯ ಯಾವುದೇ ಪಂಚನಾಮೆ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.